**7. ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು**

**ಅ) ವಿಷಯ: ನಾಗಮಂಗಲ ಮತ್ತು ಇತರೇ ಕ್ಷೇತ್ರಗಳಲ್ಲಿ ಆಕಸ್ಮಿಕವಾಗಿ ಕಬ್ಬು ಬೆಳೆಗೆ ಬೆಂಕಿ ಬಿದ್ದು ರೈತರಿಗೆ ಆಗಿರುವ ತೊಂದರೆಗೆ ಪರಿಹಾರ ನೀಡುವ ಬಗ್ಗೆ**

**ಶ್ರೀ ಸುರೇಶ್ ಗೌಡ (ನಾಗಮಂಗಲ):** ನನ್ನ ಕ್ಷೇತ್ರದಲ್ಲಿ ಮೊನ್ನೆ 40 ಎಕರೆ ಕಬ್ಬಿಗೆ ಆಕಸ್ಮಿಕವಾಗಿ ಬೆಂಕಿ ಬಿದ್ದು ಸಂಪೂರ್ಣವಾಗಿ ಬೆಳೆ ನಾಶವಾಗಿದೆ. ಜೊತಗೆ ಆ ಬೆಂಕಿಯನ್ನು ಆರಿಸಲು ಹೋಗಿ ಒಬ್ಬ ರೈತ ಸಂಪೂರ್ಣವಾಗಿ ಸುಟ್ಟಗಾಯದಿಂದ ಇವತ್ತು ಮಂಡ್ಯ ಜಿಲ್ಲಾ ಆಸ್ಪತ್ರೆಯಲ್ಲಿ admit ಆಗಿದ್ದಾನೆ. ಅವನ ಸ್ಥಿತಿ ಬಹಳ ಶೋಚನೀಯವಾಗಿದೆ. ಈ ಘಟನೆ ಆದ ಎರಡು ದಿವಸದ ಹಿಂದೆ ನನ್ನ ಕ್ಷೇತ್ರದಲ್ಲೇ ಮುದ್ದನಹಳ್ಳಿ ಎಂಬ ಗ್ರಾಮದಲ್ಲಿ ಸುಮಾರು 6 ಎಕರೆ ಕಬ್ಬು ಬೆಳೆಗೆ ವಿದ್ಯುತ್ ಶಾರ್ಟ್ ಸರ್ಕ್ಯೂಟ್‌ನಿಂದ ಬೆಂಕಿ ಬಿದ್ದು ಬೆಳೆ ಸಂಪೂರ್ಣವಾಗಿ ನಾಶವಾಗಿದೆ. ಅದಕ್ಕೂ ಎರಡು ದಿವಸಗಳ ಹಿಂದೆ ಬೊಮ್ಮನಹಳ್ಳಿ ಎಂಬ ಗ್ರಾಮದಲ್ಲಿ ಸುಮಾರು 20 ಎಕರೆ ಕಬ್ಬಿಗೆ ಬೆಂಕಿ ಬಿದ್ದಿದೆ. ಒಟ್ಟಾರೆ ಸುಮಾರು 66 ಎಕರೆ ಕಬ್ಬು ಬೆಳೆ ಸಂಪೂರ್ಣವಾಗಿ ನಾಶವಾಗಿದೆ. ಸರ್ಕಾರ ರೈತರ ಪರವಾಗಿದೆಯೆಂದು ಹೇಳಿದ್ದಾರೆ. ಅದನ್ನು ಸ್ವಾಗತಿಸುತ್ತೇವೆ. ಇವತ್ತು ರೈತರು ಬೆಳೆ ಕಳೆದುಕೊಂಡು ಕಷ್ಟದಲ್ಲಿದ್ದಾರೆ. ಜೊತೆಗೆ ಬ್ಯಾಂಕ್‌ನಿಂದ ಸಾಲ ತೆಗೆದುಕೊಂಡಿದ್ದಾರೆ. ಅದಕ್ಕೆ ದಾಖಲೆಗಳನ್ನು ಒದಗಿಸಿದ್ದಾರೆ. ದಯಮಾಡಿ ಸರ್ಕಾರ ಅದಕ್ಕೆ ಪರಿಹಾರವನ್ನು ಘೋಷಣೆ ಮಾಡಬೇಕು. ಅವರು ಮಾಡಿರುವ ಸಾಲವನ್ನು ಮನ್ನಾ ಮಾಡಬೇಕು ಎನ್ನುವುದು ನನ್ನ ಕೋರಿಕೆ.

**ಶ್ರೀ ಎಸ್. ಸುರೇಶ್ ಕುಮಾರ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು):** ಸದಸ್ಯರಾದ ಮಾನ್ಯ ಸುರೇಶ್‌ಗೌಡರವರು ನಾಗಮಂಗಲ ತಾಲ್ಲೂಕು ದೇವಲಾಪುರ ಹೋಬಳಿ ಬೊಮ್ಮನಹಳ್ಳಿ ಗ್ರಾಮದಲ್ಲಿ 40 ಎಕರೆ ಪ್ರದೇಶದಲ್ಲಿ ಬೆಳೆದಿದ್ದ ಕಬ್ಬಿನ ಬೆಳೆ, ಮದೂರು ತಾಲ್ಲೂಕು ಕೊಪ್ಪ ಹೋಬಳಿಯಲ್ಲಿ 20 ಎಕರೆ ಜಮೀನಿನಲ್ಲಿ ಬೆಳೆದಿದ್ದ ಕಬ್ಬಿನ ಬೆಳೆ ಕಿಡಿಗೇಡಿಗಳ ಬೆಂಕಿ ಅನಾಹುತದಿಂದ ಸಂಪೂರ್ಣ ಸುಟ್ಟುಹೋಗಿದೆಯೆಂದು ಹೇಳಿದ್ದಾರೆ. ಅವರು ಶೂನ್ಯ ವೇಳೆಯಲ್ಲಿ ಏನು ಪ್ರಸ್ತಾಪ ಮಾಡಿದ್ದಾರೆ ಅಲ್ಲಿ ಏನು

ನಷ್ಟವಾಗಿದೆಯೆಂಬುದನ್ನು ನೋಡಿ ಸರ್ಕಾರ ಅವರಿಗೆ ಯಾವ ರೀತಿಯಾಗಿ ಪರಿಹಾರ ಕೊಡಬೇಕು ಎನ್ನುವ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇವೆ.

**ಶ್ರೀ ಸಿದ್ಧರಾಮಯ್ಯ:** ಮಾನ್ಯ ಅಧ್ಯಕ್ಷರೆ, ನೀವು ಎಂಎಲ್ಎ ಗಳ ರಕ್ಷಣೆಗೆ ಬರಬೇಕು.

**ಅಧ್ಯಕ್ಷರು:** ಇದು ಶೂನ್ಯ ವೇಳೆ. ಅವರು ವರದಿ ತರಿಸಿ ಪರಿಹಾರ ಕೊಡುವ ವ್ಯವಸ್ಥೆ ಮಾಡುತ್ತೇವೆಂದು ಸ್ಪಷ್ಟವಾಗಿ ಹೇಳಿದ್ದಾರಲ್ಲಾ. ಪರಿಹಾರ ಕೊಡುತ್ತೇನೆಂದು ಸ್ಪಷ್ಟವಾಗಿ ಹೇಳಿದ್ದಾರೆ.

**ಶ್ರೀ ಸಿದ್ಧರಾಮಯ್ಯ:** ಅವರು 66 ಎಕರೆ ಕಬ್ಬಿನ ಬೆಳೆ short circuit ನಿಂದ ಬೆಂಕಿ ಬಿದ್ದು ನಾಶವಾಗಿದೆಯೆಂದು ಹೇಳಿದ್ದಾರೆ. It is an act of God. There is negligence also on the part of the KEB. ನಷ್ಟ ಸಂಭವಿಸಿರುವ ರೈತರಿಗೆ ಪರಿಹಾರ ಕೊಡಬೇಕೊ ಬೇಡವೊ?

**ಅಧ್ಯಕ್ಷರು:** They are entitled. ಕೆ.ಇ.ಬಿ. ಯವರು ಆ ರೀತಿ ಮಾಡಿದರೆ ಪರಿಹಾರ ಕೊಡುತ್ತಿದ್ದಾರೆ.

**ಶ್ರೀ ಸಿದ್ಧರಾಮಯ್ಯ:** ಅವರು ಎರಡು ಬೇಡಿಕೆಯನ್ನು ಇಟ್ಟಿದ್ದಾರೆ. ಒಂದು ಸಾಲಸೋಲ ಮಾಡಿ ಕಬ್ಬನ್ನು ಬೆಳೆದಿದ್ದಾರೆ. ಈಗ ಸಾಲಗಾರರಾಗಿಬಿಟ್ಟರು, ಕಬ್ಬೂ ಹೋಯಿತು. ಅವರಿಗೆ ಪರಿಹಾರ ಕೊಡಬೇಕಲ್ಲವೆ? ಆದ್ದರಿಂದ ಸರ್ಕಾರ ಅವರಿಗೆ ಯೋಗ್ಯ ಪರಿಹಾರ ಕೊಡುತ್ತೇವೆ, ಸಾಲವನ್ನೂ ಮನ್ನಾ ಮಾಡುತ್ತೇವೆಂದು ಹೇಳಲಿ.

**ಶ್ರೀ ಟಿ.ಬಿ.ಜಯಚಂದ್ರ:** ಮಾನ್ಯ ಅಧ್ಯಕ್ಷರೆ, ಇದರಲ್ಲಿ ಏನಾಗಿದೆ ಎಂದರೆ, ಕೇವಲ ಇದೊಂದು ಕ್ಷೇತ್ರದಲ್ಲಿ ಅಲ್ಲ, ಇಡೀ ರಾಜ್ಯದಲ್ಲಿ ಈ ರೀತಿಯಾಗುತ್ತಿದೆ. Electrical short circuit ಆದಾಗ ಅವರು ಹೇಳತಕ್ಕದ್ದು ಇಷ್ಟೇ, ಅದು ಏನಾದರೂ within some limit ಆದರೆ ಮಾತ್ರ ನಾವು ಮಾಡುತ್ತೇವೆ, ಇಲ್ಲದಿದ್ದರೆ ಮಾಡುವುದಿಲ್ಲ ಎನ್ನುವಂತಹ ಮಾತನ್ನು ಹೇಳುತ್ತಾರೆ. ಆಕಸ್ಮಿಕವಾಗಿ ಬೆಂಕಿ ಬಿದ್ದು ತೊಂದರೆಯಾದಂತಹ ಸಂದರ್ಭದಲ್ಲಿ ಪ್ರಕೃತಿ ವಿಕೋಪದ ಅಡಿಯಲ್ಲಿ ಕೊಡಲಿಕ್ಕೆ ಬರುತ್ತದೆ. ಅದನ್ನು ಹೊರತು ಪಡಿಸಿ short circuit ಗೆ ಎಂದರೆ, ಅದನ್ನು ಕೊಡಲಿಕ್ಕೆ ಬರುವುದಿಲ್ಲ. ಇಂತಹ

ನೂರಾರು instances ಆಗಿದೆ. ಯಾವತ್ತೂ ಕೂಡ ಪ್ರಕೃತಿ ವಿಕೋಪದ ನಿಧಿ ಅಡಿಯಲ್ಲೂ ಕೊಟ್ಟಿಲ್ಲ ಮತ್ತು short circuit ಅಡಿಯಲ್ಲಿ KEB ಯವರಂತೂ ಯಾವತ್ತೂ ಕೊಟ್ಟೇ ಇಲ್ಲ. ದಯಮಾಡಿ ತಾವು ಉತ್ತರ ಕೊಟ್ಟ ಮೇಲೆ ಅದು ಆಗಬೇಕಾಗುತ್ತದೆ. ಅದಕ್ಕಾಗಿ...

(ಗೊಂದಲ)

**ಅಧ್ಯಕ್ಷರು:** ಇದು ಶೂನ್ಯ ವೇಳೆಯಲ್ಲಿ ಮಾಡಿರುವ ಪ್ರಸ್ತಾಪವಾಗಿದೆ.

(ಗೊಂದಲ)

**ಶ್ರೀ ಹೆಚ್.ಎಸ್.ಮಹದೇವಪ್ರಸಾದ್** :– ಸ್ವಲ್ಪ ಸರ್ಕಾರಕ್ಕೆ ಇದರ ಬಗ್ಗೆ ಬೆಳಕು ಚೆಲ್ಲುತ್ತೇವೆ.

(ಗೊಂದಲ)

**ಅಧ್ಯಕ್ಷರು:** ಮಾನ್ಯ ಸಚಿವರು ಸ್ಪಷ್ಟವಾಗಿ ಹೇಳಿದ್ದಾರೆ. ಮತ್ತೆ ಹೇಳಿ ಎಂದರೆ ಹೇಗೆ?

(ಗೊಂದಲ)

**ಶ್ರೀ ಹೆಚ್.ಎಸ್.ಮಹದೇವಪ್ರಸಾದ್:** ಅವರು ಸ್ಪಷ್ಟವಾಗಿ ಹೇಳಿದ್ದರೂ ಕೂಡ ...

(ಗೊಂದಲ)

**ಅಧ್ಯಕ್ಷರು:** ಮಾನ್ಯ ಎಂ.ಟಿ.ಕೃಷ್ಣಪ್ಪನವರು ತಮ್ಮ ವಿಚಾರ ಪ್ರಸ್ತಾಪಿಸಿ.

(ಗೊಂದಲ)

**ಶ್ರೀ ಹೆಚ್.ಎಸ್.ಮಹದೇವಪ್ರಸಾದ್:** ಮಾನ್ಯ ಅಧ್ಯಕ್ಷರೆ, ಒಂದು ನಿಮಿಷ. ಇದರಲ್ಲಿ ರೈತರ ಜೀವನ್ಮರಣದ ಪ್ರಶ್ನೆ ಅಡಗಿದೆ.

(ಗೊಂದಲ)

**ಅಧ್ಯಕ್ಷರು:** ಅದಕ್ಕೆ ಈಗಾಗಲೇ ಹೇಳಿದ್ದಾರೆ. ನಾನು ಈಗಾಗಲೇ ಮಾನ್ಯ ಎಂ.ಟಿ.ಕೃಷ್ಣಪ್ಪನವರನ್ನು ಕರೆದಿದ್ದೇನೆ. ನೀವು ಈ ರೀತಿ ಪ್ರತಿಯೊಂದಕ್ಕೂ ಹೇಳಿದರೆ ಹೇಗೆ? ಇದು ಶೂನ್ಯ ವೇಳೆಯಲ್ಲಿ ತೆಗೆದುಕೊಂಡಿರುವ ಪ್ರಸ್ತಾಪವಾಗಿದೆ.

(ಗೊಂದಲ)

**ಶ್ರೀ ಹೆಚ್.ಎಸ್.ಮಹದೇವಪ್ರಸಾದ್:** ನಾವು ಅನವಶ್ಯಕವಾಗಿ ಹೇಳುವವರು ಅಲ್ಲ.

(ಗೊಂದಲ)

**ಅಧ್ಯಕ್ಷರು:** ಎಲ್ಲವೂ ರೈತರಿಗೆ ಸಂಬಂಧಪಟ್ಟಿದ್ದೇ. ಬೆಳಗ್ಗಿನಿಂದ ಇಲ್ಲಿಯವರೆಗೆ ಮಾತನಾಡಿದ್ದು ಎಲ್ಲವೂ ಕೂಡ ರೈತರಿಗೆ ಸಂಬಂಧಪಟ್ಟಿದ್ದೇ ಆಗಿದೆ.

(ಗೊಂದಲ)

**ಅಧ್ಯಕ್ಷರು:** ಮಾನ್ಯ ಸಚಿವರು ಈಗಾಗಲೇ ಸ್ಪಷ್ಟವಾಗಿ ಹೇಳಿದ್ದಾರೆ.

(ಗೊಂದಲ)

**ಶ್ರೀ ಹೆಚ್.ಎಸ್.ಮಹದೇವಪ್ರಸಾದ್:** ನಮಗೆ ತಿಳಿದಿರುವ ವಿಚಾರವನ್ನು ತಿಳಿಸುವುದಕ್ಕೆ ತಾನೇ ನಾವು ಸದನಕ್ಕೆ ಬರುವುದು.

(ಗೊಂದಲ)

**ಅಧ್ಯಕ್ಷರು:** ನಿಮಗೆ ವಿಚಾರ ತಿಳಿದಿರಬಹುದು. ಆದರೆ ಇಲ್ಲಿ ಶೂನ್ಯ ವೇಳೆಯಲ್ಲಿ ಇದನ್ನು ಪ್ರಸ್ತಾಪಿಸಿದ್ದಾರೆ. ಇಲ್ಲಿ ಚರ್ಚೆಗೆ ಅವಕಾಶವಿಲ್ಲ. ವಿಚಾರ ಪ್ರಸ್ತಾಪಿಸಿದ್ದು ಬೇರೆ ಮಾನ್ಯ ಸದಸ್ಯರು. ನೀವೇಕೆ ಇದರ ಬಗ್ಗೆ ಮಾತನಾಡುತ್ತೀರಿ?

(ಗೊಂದಲ)

**ಶ್ರೀ ಸಿದ್ದರಾಮಯ್ಯ:** ಮಾನ್ಯ ಅಧ್ಯಕ್ಷರೆ, ಇದನ್ನು ವಿಶೇಷ ಪ್ರಕರಣವೆಂದು ಪರಿಗಣಿಸಿ ಪರಿಹಾರ ಕೊಡುತ್ತೇವೆಂದು ಸರ್ಕಾರ ಹೇಳಲಿ. 60 ಎಕರೆ ಕಬ್ಬು ಹೋಗಿದೆ, ಅದಕ್ಕೆ ಪರಿಹಾರ ಕೊಡಿ.

(ಗೊಂದಲ)

**ಶ್ರೀ ಹೆಚ್.ಎಸ್.ಮಹದೇವಪ್ರಸಾದ್:** ಹನ್ನೂರಿನಲ್ಲಿ 25 ಎಕರೆ ಕಬ್ಬು ಸುಟ್ಟು ಹೋಗಿದೆ.

(ಗೊಂದಲ)

**ಶ್ರೀ ಬಸವರಾಜ್ ಬೊಮ್ಮಾಯಿ:** ಮಾನ್ಯ ಸಿದ್ದರಾಮಯ್ಯನವರೆ, ನೀವು ಈ ಕಡೆಗೆ ಕುಳಿತು ಕೆಲಸ ಮಾಡಿದ್ದೀರಿ.

(ಗೊಂದಲ)

**ಶ್ರೀ ಸಿದ್ದರಾಮಯ್ಯ:** ನಾವು ಆ ಕಡೆಗೆ ಇದ್ದಾಗ ರೈತರ ಪರ ಇದ್ದೆವು.

(ಗೊಂದಲ)

**ಶ್ರೀ ಬಸವರಾಜ್ ಬೊಮ್ಮಾಯಿ:** ಕಾನೂನು ಪ್ರಕಾರ ಹೋಗಬೇಕಾಗುತ್ತದೆ.

(ಗೊಂದಲ)

**ಅಧ್ಯಕ್ಷರು:** ನೀವು ಹಿರಿಯ ಸದಸ್ಯರಿದ್ದೀರಿ. Standing crop ಗೆ calamity ಅಡಿಯಲ್ಲಿ ಕೊಡಲಿಕ್ಕೆ provision ಇದೆ. ನೀವು ಈ ಬಗ್ಗೆ ಗೊತ್ತಿದ್ದರೂ ಸಹ ಮತ್ತೆ ಆ ಬಗ್ಗೆ ಕೇಳುತ್ತೀರಲ್ಲಾ?

(ಗೊಂದಲ)

**ಶ್ರೀ ಹೆಚ್.ಎಸ್.ಮಹದೇವಪ್ರಸಾದ್:** Provision ಇಲ್ಲ.

(ಗೊಂದಲ)

**ಅಧ್ಯಕ್ಷರು:** ಇದೆ.

(ಗೊಂದಲ)

**ಶ್ರೀ ಬಸವರಾಜ್ ಬೊಮ್ಮಾಯಿ:** ಮಾನ್ಯ ಜಯಚಂದ್ರರವರೆ, ಇಂತಹದ್ದು ಬೇಕಾದಷ್ಟು ಆಗಿವೆ ಎಂದು ಆಗಲೇ ಹೇಳಿದರಲ್ಲಾ?

(ಗೊಂದಲ)

**ಅಧ್ಯಕ್ಷರು:** ನಾನು ಮಾನ್ಯ ಎಂ.ಟಿ.ಕೃಷ್ಣಪ್ಪನವರನ್ನು ಕರೆದಿದ್ದೇನೆ.

(ಗೊಂದಲ)

**ಶ್ರೀ ಬಸವರಾಜ್ ಬೊಮ್ಮಾಯಿ:** ಮಾನ್ಯ ಅಧ್ಯಕ್ಷರೆ, ಇದು ಶೂನ್ಯ ವೇಳೆಯಲ್ಲಿ ಪ್ರಸ್ತಾಪವಾಗಿದೆ. ಇದರ ಬಗ್ಗೆ ಚರ್ಚೆಗೆ ಅವಕಾಶ ಕೊಡಬಾರದು.

(ಗೊಂದಲ)

**ಶ್ರೀ ಹೆಚ್.ಎಸ್. ಮಹಾದೇವಪ್ರಸಾದ್:** ಮಾನ್ಯ ಅಧ್ಯಕ್ಷರೆ, ಪ್ರಕೃತಿ ವಿಕೋಪ ಪರಿಹಾರ ನಿಧಿಯಿಂದ electric ವ್ಯತ್ಯಾಸದಿಂದ ಕಬ್ಬು ಹಾನಿಯಾದರೆ ಪರಿಹಾರ ಕೊಡಲಿಕ್ಕೆ ಬರುವುದಿಲ್ಲವೆಂದು clear ಆಗಿ ಜಿಲ್ಲಾಧಿಕಾರಿಗಳು ಹೇಳಿ ಬಿಡುತ್ತಾರೆ. ಇಂತಹ ಕೇಸ್‌ನಲ್ಲಿ special provision ಮಾಡಿ ರೈತರಿಗೆ ನೆರವಾಗುವಂತಹ ಕೆಲಸವನ್ನು ಸರ್ಕಾರದವರು ಮಾಡಬೇಕು. ಸಕ್ಕರೆ factoryಗಳೇನಿವೆಯೋ, ಅವುಗಳು ಕಬ್ಬನ್ನು in–timeನಲ್ಲಿ ಕಟಾವು ಮಾಡುವುದಿಲ್ಲ. 12 ತಿಂಗಳು ಅವರ ಟೈಮ್ ಇದ್ದರೆ, ಇದು 14 ತಿಂಗಳಾಗಿರುತ್ತದೆ. ಕಬ್ಬು ಜಲ್ಲೆ ಬಹಳ ಎತ್ತರಕ್ಕೆ ಬೆಳೆದಾಗ, main line wireಗೆ ಅದು touch ಆಗುತ್ತದೆ. ಆಗ short circuit ಆಗಿ ಕಬ್ಬು ಭಸ್ಮವಾಗುತ್ತದೆ. ಇದಕ್ಕೆ ಪ್ರಕೃತಿ ವಿಕೋಪ ಪರಿಹಾರ ನಿಧಿಯಿಂದ ಪರಿಹಾರ ಕೊಡುವುದಕ್ಕೆ ಅವಕಾಶವಿಲ್ಲದಿರುವುದರಿಂದ ಸರ್ಕಾರ ಈ ರೀತಿಯಲ್ಲಿ electric wire ಗೆ ಕಬ್ಬು touch ಆಗಿ ಹಾನಿಯಾಗಿದ್ದರೆ ಅದಕ್ಕೆ ಯಾವುದಾದರೂ ರೂಪದಲ್ಲಿ ಪರಿಹಾರ ಕೊಡಿಸಬೇಕು. ಸಕ್ಕರೆ factoryಯಿಂದಲಾದರೂ ಪರಿಹಾರ ಕೊಡಿಸಬೇಕು. ಅವರು in–time ನಲ್ಲಿ ಆ ಕಬ್ಬನ್ನು ಕಟಾವು ಮಾಡಿರುವುದಿಲ್ಲ. ಸರ್ಕಾರ ಅದನ್ನು ವಿಶೇಷ ಪ್ರಕರಣವೆಂದು ಪರಿಗಣಿಸಿ ಪರಿಹಾರ ಕೊಡಬೇಕು. ಎರಡರಲ್ಲಿ ಒಂದನ್ನಾದರೂ ಕೊಡಬೇಕು.

(ಗೊಂದಲ)

**ಶ್ರೀ ಸಿದ್ದರಾಮಯ್ಯ:** ವಿಶೇಷ ಪ್ರಕರಣವೆಂದು ಸರ್ಕಾರ ಕ್ಯಾಬಿನೆಟ್‌ನಲ್ಲಿ decision ತೆಗೆದುಕೊಂಡು ಪರಿಹಾರ ಕೊಡಲಿ.

(ಗೊಂದಲ)

**ಶ್ರೀ ಎಸ್. ಸುರೇಶ್‌ಕುಮಾರ್:** ಇದೊಂದು ವಿಶೇಷ ಪ್ರಕರಣವೆಂದು ನಾನು ಸಂಪೂರ್ಣವಾಗಿ ಒಪ್ಪಿಕೊಳ್ಳುತ್ತೇನೆ. ಆದರೆ ಬೇಸಿಗೆಯಲ್ಲಿ ಪ್ರತಿ ವಾರವೂ ಇಂತಹ ವಿಶೇಷ ಪ್ರಕರಣ ಆಗುತ್ತಿರುತ್ತದೆ. ಈಗಾಗಲೇ ಮಾನ್ಯ ಜಯಚಂದ್ರರವರು ಬಹಳ ಸ್ಪಷ್ಟವಾಗಿ ಹೇಳಿದ್ದಾರೆ. ಇದರ ಬಗ್ಗೆ ಯಾವ ರೀತಿ

ಪರಿಹಾರ ಕೊಡಬೇಕೆಂಬುದರ ಬಗ್ಗೆ ಯೋಚನೆ ಮಾಡಿ, ಚರ್ಚೆ ಮಾಡಿ, ಸೂಕ್ತ ಪರಿಹಾರ ಕೊಡುವುದಕ್ಕೆ ಸರ್ಕಾರ ಕ್ರಮ ತೆಗೆದುಕೊಳ್ಳುತ್ತದೆ.

**ಆ) ವಿಷಯ : ವಕೀಲರ ಸಂಘದ ಕಟ್ಟಡ ನಿರ್ಮಾಣಕ್ಕೆ ಒತ್ತಾಯಿಸಿ ತುಮಕೂರಿನಲ್ಲಿ ವಕೀಲರು ಕೋರ್ಟ್ ಕಲಾಪಗಳನ್ನು ಬಹಿಷ್ಕರಿಸಿರುವ ಬಗ್ಗೆ.**

**ಶ್ರೀ ಎಂ.ಟಿ.ಕೃಷ್ಣಪ್ಪ [ತುರುವೇಕೆರೆ]:** ಮಾನ್ಯ ಅಧ್ಯಕ್ಷರೆ, ತುಮಕೂರು ಜಿಲ್ಲೆ ವಕೀಲರ ಸಂಘದ ವತಿಯಿಂದ 7ನೇ ತಾರೀಖಿನಿಂದ ಕೋರ್ಟ್ ಬಹಿಷ್ಕಾರ ಮಾಡಿದ್ದಾರೆ. ಅಲ್ಲಿ ಒಂದರಿಂದ ಒಂದೂವರೆ ಸಾವಿರ ಜನ ವಕೀಲರು practice ಮಾಡುತ್ತಾರೆ. ವಕೀಲರ ಸಂಘ ಬಹುಶ: ನೂರು ವರ್ಷಗಳ ಹಳೆಯದು. ಅಲ್ಲಿ toilet ಇಲ್ಲ, ಕುಡಿಯುವ ನೀರಿಲ್ಲ. ಹೆಣ್ಣುಮಕ್ಕಳಿಗೆ toilet ಇಲ್ಲದೆ ಬಹಳ ಸಂಕಷ್ಟದಲ್ಲಿದ್ದಾರೆ. ಇದರ ಜೊತೆಗೆ ಗ್ರಂಥಾಲಯ ಸಹ ಇಲ್ಲ. ಅತ್ಯಂತ ಕಳಪೆ building ಅದಾಗಿದೆ. ಅದನ್ನು demolition ಮಾಡಿ, ಹೊಸದಾಗಿ building ವೊಂದನ್ನು ಕಟ್ಟಿಕೊಡಿ ಎಂದು ಅವರು ಸಂಬಂಧಪಟ್ಟ ಎಲ್ಲರನ್ನೂ ಸಹ approach ಮಾಡಿದ್ದಾರೆ. ಮಾನ್ಯ ಸಚಿವರಿಗೆ ಮತ್ತು ಸಂಬಂಧಪಟ್ಟ administrative judgeಗೆ ಮನವಿ ಮಾಡಿದ್ದರೂ ಸಹ ಕೆಲಸವಾಗಿಲ್ಲ. ಆದ್ದರಿಂದ ಅನಿವಾರ್ಯವಾಗಿ ಅವರ ಗೌರವ ಕಾಪಾಡಿಕೊಳ್ಳುವುದಕ್ಕೋಸ್ಕರ ಇವತ್ತು ಕೋರ್ಟ್ ಬಹಿಷ್ಕಾರ ಮಾಡಿದ್ದಾರೆ. 7ನೇ ತಾರೀಖಿನಿಂದ ಅಲ್ಲಿ strike ನಡೆಯುತ್ತಿದೆ. ದಯವಿಟ್ಟು ಕೂಡಲೇ ಅಲ್ಲಿ ಹೊಸ buildingವೊಂದನ್ನು ಕಟ್ಟಿ, ಅವರಿಗೊಂದಷ್ಟು ಸವಲತ್ತುಗಳನ್ನು ಕೊಡಬೇಕೆಂಬುದು ಅವರ ಬೇಡಿಕೆಯಾಗಿದೆ. ಇದರ ಜೊತೆಗೆ ತುರುವೇಕೆರೆ ತಾಲ್ಲೂಕಿನ ಕಟ್ಟಡ ಸಹಾ ಅರ್ಧಂಬರ್ಧ ನಿಂತು ಹೋಗಿದೆ. ಸನ್ಮಾನ್ಯ ಸುರೇಶ್‌ಕುಮಾರ್‌ರವರು ತುರುವೇಕೆರೆಗೆ ಬಂದಂತಹ ಸಂದರ್ಭದಲ್ಲಿ, ಇನ್ನು ಆರು ತಿಂಗಳಿನಲ್ಲಿ complete ಮಾಡುತ್ತೇವೆಂದು ಹೇಳಿದ್ದರು. ಆ ಆರು ತಿಂಗಳು ಹೋಗಿ, ಈಗಾಗಲೇ ಸುಮಾರು ಒಂದೂವರೆಯಿಂದ ಎರಡು ವರ್ಷ ಕಳೆಯುತ್ತಾ ಬಂದಿದೆ. ದಯಮಾಡಿ ಇದರ ಬಗ್ಗೆ ಆದ್ಯತೆ ಮೇರೆಗೆ ಕ್ರಮ ತೆಗೆದುಕೊಳ್ಳಬೇಕೆಂದು ಈ ಸಂದರ್ಭದಲ್ಲಿ ತಮ್ಮ ಮೂಲಕ ಮಾನ್ಯ ಸಚಿವರಿಗೆ ನಾನು ಒತ್ತಾಯ ಮಾಡುತ್ತೇನೆ.